ಅನುಬಂಧ-1

-745-



KARNATAKA LOKAYUKTA

COMPT/UPLOK/BCD-254/2009/ARE-5

Multi-storied Building,
Dr.B.R. Ambedkar Veedhi,
Bangalore,
Dated: 13/09/2017.

## SPECIAL REPORT UNDER SECTION 12(5) OF THE KARNATAKA LOKAYUKTA ACT, 1984

Sub: For taking action on the report made u/s 12(3) of Karnataka Lokayukta Act dt: 13.01.2014 against Sri.Manjunath,KAS (Jr.grade), the then Tahsildar, Bangalore South Taluk, Bangalore Urban District- regarding his misconduct as public servant -reg.

----

1. On the complaint filed by Sri. Kempaiah r/o Srinivasa Colony, Uttarahalli Hobli, Bangalore South Taluk (hereinafter referred to as Complainant ) against Tahasildar, Bangalore South Taluk, Bangalore Urban District ( hereinafter referred to as Respondent) alleging that 1 acre 20 guntas of land carved out of Sy.No.28 of Arehalli Village was granted to the Complainant under dharkast in the year 1975-76 and the Complainant approached the Respondent through his application dt: 2.3.2009, paying necessary fees requesting to provide him dharkast issue register copy, RR-5, ILR-6, revenue sketch pertaining to the land granted to him, but the Respondent failed to consider his application, investigation was taken up u/s 9 of the Karnataka Lokayukta Act against the Respondent.

2. During the course of investigation, it was revealed that one Sri.Manjunath was the then Tahsildar, who worked in the said

N. Anandz

Tahsil office from 22.10.2008 to 26.11.2011. Therefore he was impleaded as Respondent and his comments was called for. Though he was served with the notice, he has not submitted comments.

3. Consideration of the materials on record shows that though Complainant applied for dharkast issue register copy, RR, ILR-6, revenue sketch on 2.3.2009 and paid necessary fees and Respondent received said application along with necessary fees, he failed to provide documents sought for by the Complainant.

4. Since the said facts and materials on record prima facie show that Respondent Sri.Manjunath, KAS (Jr.Grade) the then Tahsildar, Bangalore South Taluk, Bangalore Urban District has committed misconduct under Rule 3(1) of KCS (Conduct) Rules, 1966 recommendation was made under section 12(3) of Karnataka Lokayukta Act, 1984 to the Competent Authority on 16.1.2014 to initiate Disciplinary proceedings against the Respondent and to entrust the inquiry to the Hon'ble Upalokayukta -1 under Rule 14-A of Karnataka Civil Services (Classification, Control and Appeal) Rules, 1957. But till date no action is taken to initiate Disciplinary proceedings against Respondent for his misconduct as recommended in the 12(3) report dt: 13.1.2014.

5. Failure on the part of the Competent Authority in not taking action against Sri.Manjunath, KAS (Jr.Grade) the then Tahsildar, Bangalore South Taluk, Bangalore Urban District for his misconduct, deserves a Special report in the case.

N. Anand [signature]

6. Hence, this Special report is submitted u/s 12(5) of the Karnataka Lokayukta Act to His Excellency, the Governor of Karnataka for kind perusal and further needful action.

(Justice N.ANANDA) 13/9
Upalokayukta-1,
KARNATAKA STATE,
BENGALURU.

ಸಂಖ್ಯೆ: ಸಿಆಸುಇ 63 ಕೆಇವಿ 2015

## ವಿವರಣಾತ್ಮಕ ಜ್ಞಾಪನ

ವಿಷಯ: ಮಾನ್ಯ ಉಪ ಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(5)ರಡಿ ಶ್ರೀ ಸಿ. ಮಂಜುನಾಥ, ಕೆ.ಎ.ಎಸ್(ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್. ಬೆಂಗಳೂರು ದಕ್ಷಿಣ ತಾಲ್ಲೂಕು, ಇವರ ವಿರುದ್ಧ ಗೌರವಾನ್ವಿತ ರಾಜ್ಯಪಾಲರಿಗೆ ಸಲ್ಲಿಸಿರುವ ವಿಶೇಷ ವರದಿಯ ಬಗ್ಗೆ.

ಶ್ರೀ ಸಿ. ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಇವರು ಈ ಹಿಂದೆ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸಿದ ಅವಧಿಗೆ ಸಂಬಂಧಿಸಿದಂತೆ ಮಾನ್ಯ ಉಪ ಲೋಕಾಯುಕ್ತ-1, ಕರ್ನಾಟಕ ಲೋಕಾಯುಕ್ತ, ಇವರು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3) ರಡಿ ದಿನಾಂಕ: 13.01.2014 ರಂದು ಸಲ್ಲಿಸಿದ ವರದಿಯಲ್ಲಿ ಶ್ರೀ ಕೆಂಪಯ್ಯ, ಶ್ರೀನಿವಾಸ ಕಾಲೋನಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇವರು ದಿನಾಂಕ:22.05.2009 ರಂದು ಲೋಕಾಯುಕ್ತದಲ್ಲಿ ದಾಖಲಿಸಿದ ದೂರಿನಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಅರೇಹಳ್ಳಿ ಗ್ರಾಮದ ಸರ್ವೆ ನಂ.28ರ ಜಮೀನು ಬಾಬ್ತು 1977-78ನೇ ಸಾಲಿನಲ್ಲಿ ತಮಗೆ ದರಕಾಸ್ತ್ ಮೂಲಕ ಮಂಜೂರು ಮಾಡಿರುವ ಜಮೀನಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನೀಡುವಂತೆ ಕೋರಿ ದಿನಾಂಕ:02.03.2009 ರಂದು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಇವರಿಗೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ತಹಶೀಲ್ದಾರರು ದಾಖಲೆಗಳನ್ನು ನೀಡುವಲ್ಲಿ ಅನಗತ್ಯ ವಿಳಂಬ, ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿ ತೋರಿರುವುದರಿಂದ ತಮಗೆ ಬಹಳ ಅನ್ಯಾಯವಾಗುತ್ತಿದ್ದು, ಸದರಿ ದಾಖಲೆಗಳನ್ನು ಕೊಡಿಸಿಕೊಡುವಂತೆ ಕೋರಲಾಗಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರಿಯ ವಿರುದ್ಧ ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮ 14-ಎ ರಡಿ ಇಲಾಖಾ ವಿಚಾರಣೆಗಾಗಿ ಮಾನ್ಯ ಉಪ ಲೋಕಾಯುಕ್ತ-1 ರವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲಾಗಿತ್ತು.

ಮಾನ್ಯ ಉಪ ಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3) ರಡಿ ದಿನಾಂಕ: 13.01.2014 ರಂದು ಸಲ್ಲಿಸಿದ ವರದಿಯ ಬಗ್ಗೆ ಕಂದಾಯ ಇಲಾಖೆಯು ಮಾನ್ಯ ಕಂದಾಯ ಸಚಿವರ ಅನುಮೋದನೆಯೊಂದಿಗೆ ದಿನಾಂಕ:08.05.2015, 05.10.2015 ಹಾಗೂ 07.12.2016ರ ಅನಧಿಕೃತ ಟಿಪ್ಪಣಿಗಳಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಲಾಗಿದೆ:

"............ ದೂರುದಾರರಾದ ಶ್ರೀ ಕೆಂಪಯ್ಯನವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಶ್ರೀ ಮಂಜುನಾಥರವರಿಗೆ ಸಲ್ಲಿಸಿದ್ದ ದಿನಾಂಕ ರಹಿತವಾಗಿದ್ದ

-2

ಅರ್ಜಿಯಲ್ಲಿ ಕೆಲವೊಂದು ದಾಖಲೆಗಳನ್ನು ಒದಗಿಸುವಂತೆ ಕೋರಿದ್ದು, ಸದರಿ ಅರ್ಜಿಯು ತಹಶೀಲ್ದಾರರ ಕಚೇರಿಯಲ್ಲಿ ದಿ:02.03.2009 ರಂದು ಸ್ವೀಕೃತಗೊಂಡು, ಸಂಬಂಧಪಟ್ಟ ವಿಷಯ ನಿರ್ವಾಹಕರು ದೂರುದಾರರ ಅರ್ಜಿಯ ಬಗ್ಗೆ ಸಕಾಲಿಕವಾಗಿ ಕ್ರಮ ಕೈಗೊಂಡು ತಹಶೀಲ್ದಾರರ ಸಹಿಗಾಗಿ/ ಆದೇಶಕ್ಕಾಗಿ ಮಂಡಿಸದಿರುವುದರಿಂದ ವಿಳಂಬ ಉಂಟಾಗಿರುತ್ತದೆ. ಈ ವಿಳಂಬಕ್ಕೆ ಸಂಬಂಧಪಟ್ಟ ವಿಷಯ ನಿರ್ವಾಹಕರು ಹೊಣೆಗಾರರಾಗಿದ್ದು, ಆರೋಪಿತ ಅಧಿಕಾರಿಯು ಹೊಣೆಗಾರರಾಗಿರುವುದಿಲ್ಲ ಎಂಬ ಅಂಶವನ್ನು ಜಿಲ್ಲಾಧಿಕಾರಿಗಳ ದಿನಾಂಕ:02.01.2015 ಪತ್ರದಲ್ಲಿಯೂ ಸ್ಪಷ್ಟವಾದ ಕಾರಣಗಳನ್ನು ನೀಡಲಾಗಿದೆ.

ಆರೋಪಿತ ಅಧಿಕಾರಿಯು ಕಚೇರಿಯ ಮುಖ್ಯಸ್ಥರಾಗಿದ್ದರೂ, ಸಾರ್ವಜನಿಕರಿಂದ ಸ್ವೀಕರಿಸಿದ ಪ್ರತಿಯೊಂದು ಅರ್ಜಿ/ ಮನವಿಗಳ ಬಗ್ಗೆ ಗಮನಹರಿಸಿ ಕ್ರಮ ತೆಗೆದುಕೊಂಡು ಮಂಡಿಸುವ ಜವಾಬ್ದಾರಿ ವಿಷಯ ನಿರ್ವಾಹಕರ ಮೇಲಿದ್ದು ತಹಶೀಲ್ದಾರ್ ಹುದ್ದೆಗೆ ಬಹುವಿಧದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಿರುವುದರಿಂದ ಕಚೇರಿಯಲ್ಲಿ ಸ್ವೀಕರಿಸಿದ ಪ್ರತಿಯೊಂದು ಅರ್ಜಿ / ಮನವಿಗಳ ಬಗ್ಗೆ ಗಮನಹರಿಸಿ ಕ್ರಮ ತೆಗೆದುಕೊಳ್ಳುವುದು ಕಚೇರಿಯ / ಘಟಕದ ಮುಖ್ಯಸ್ಥರಾದ ತಹಶೀಲ್ದಾರ್‌ರವರಿಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಪ್ರಕರಣದ ಬಗ್ಗೆ ಜಿಲ್ಲಾಧಿಕಾರಿಗಳು ನೀಡಿರುವ ಸಮರ್ಥನೆ / ವರದಿಯನ್ನು ಪುನರುಚ್ಚರಿಸುತ್ತಾ ಮತ್ತು ಈ ಮೇಲ್ಕಂಡ ಅಂಶಗಳಿಂದ ಪ್ರಕರಣದಲ್ಲಿ ಉಂಟಾದ ವಿಳಂಬಕ್ಕೆ ಆರೋಪಿತ ಅಧಿಕಾರಿಯು ನೇರವಾಗಿ ಹೊಣೆಗಾರರಲ್ಲದಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ."

ಕಂದಾಯ ಇಲಾಖೆಯು ಮಾನ್ಯ ಕಂದಾಯ ಸಚಿವರ ಅನುಮೋದನೆಯೊಂದಿಗೆ ದಿನಾಂಕ:08.05.2015, 05.10.2015 ಹಾಗೂ 07.12.2016ರ ಅನಧಿಕೃತ ಟಿಪ್ಪಣಿಗಳಲ್ಲಿ ನೀಡಿರುವ ಅಭಿಪ್ರಾಯವನ್ನು ಪರಿಗಣಿಸಿ, ಅಧಿಕಾರಿಯ ವಿರುದ್ಧದ ವಿಚಾರಣೆಯನ್ನು ಕರ್ನಾಟಕ ನಾಗರಿಕ ಸೇವಾ (ಸಿಸಿಎ) ನಿಯಮ 1957ರ ನಿಯಮ-14ಎ ರಡಿ ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಹಿಸುವಂತೆ ಮಾನ್ಯ ಉಪಲೋಕಾಯುಕ್ತ-1 ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿ

ಸಲ್ಲಿಸಿದ್ದ ವರದಿಯಲ್ಲಿನ ಶಿಫಾರಸ್ಸಿನನ್ವಯ ಕ್ರಮವಹಿಸುವ ಬದಲು ಅಧಿಕಾರಿಯ ವಿರುದ್ಧದ ಆರೋಪಗಳಿಗೆ ಇಲಾಖಾ ವತಿಯಿಂದಲೇ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ, ಸದರಿ ಪ್ರಸ್ತಾವನೆಗೆ ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಯೊಂದಿಗೆ ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಪ್ರಕರಣ ಸಂಖ್ಯೆ: ಸಿ: 247/2018ರ ದಿನಾಂಕ: 03.03.2018 ರಲ್ಲಿ ಅನುಮೋದನೆಯನ್ನು ಪಡೆದು, ಆದೇಶ ಸಂಖ್ಯೆ: ಸಿಆಸುಇ 63 ಕೆಇವಿ 2015, ದಿನಾಂಕ: 11.04.2018 ರಂದು ಆದೇಶ ಹೊರಡಿಸಿ, ದಿ:27.06.2018ರಂದು ಇಲಾಖಾ ವಿಚಾರಣೆ ಪ್ರಾರಂಭಿಸಲಾಗಿದೆ.

ಮಾನ್ಯ ಉಪ ಲೋಕಾಯುಕ್ತ-1, ಇವರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(5)ರಡಿ ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ, ಇವರ ವಿರುದ್ಧ ಗೌರವಾನ್ವಿತ ರಾಜ್ಯಪಾಲರಿಗೆ ವಿಶೇಷ ವರದಿಯನ್ನು ಸಲ್ಲಿಸಿದ್ದಾರೆ. ಈ ರೀತಿ ವಿಶೇಷ ವರದಿ ಸಲ್ಲಿಸಲ್ಪಟ್ಟ ಪ್ರಕರಣಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(7) ರಲ್ಲಿ ನಿಗದಿಪಡಿಸಲಾಗಿದ್ದು, ಅದು ಈ ಕೆಳಕಂಡಂತಿದೆ.

> "12(7): *(5)ನೇ ಉಪಪ್ರಕರಣದ ಮೇರೆಗೆ ವಿಶೇಷ ವರದಿ, ಅಥವಾ (6)ನೇ ಉಪಪ್ರಕರಣದ ಮೇರೆಗೆ ವಾರ್ಷಿಕ ವರದಿ ಬಂದ ತರುವಾಯ, ರಾಜ್ಯಪಾಲರು ಅದರ ಒಂದು ಪ್ರತಿಯನ್ನು ವಿವರಣಾತ್ಮಕ ಜ್ಞಾಪನದೊಂದಿಗೆ ರಾಜ್ಯ ವಿಧಾನ ಮಂಡಲದ ಪ್ರತೊಯೊಂದು ಸದನದ ಮುಂದೆ ಮಂಡಿಸುವ ಏರ್ಪಾಡು ಮಾಡತಕ್ಕದ್ದು*."

ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಜಿಲ್ಲೆ, ಇವರ ವಿರುದ್ಧ ಮಾನ್ಯ ಉಪ ಲೋಕಾಯುಕ್ತ-1 ರವರು ನೀಡಿರುವ ಶಿಫಾರಸ್ಸನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದೆ. ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಕಾರಣಗಳಿಂದಾಗಿ ಶಿಫಾರಸ್ಸನ್ನು ಒಪ್ಪದೇ ಪ್ರಕರಣವನ್ನು ಇಲಾಖಾ ವತಿಯಿಂದಲೇ ವಿಚಾರಣೆ ನಡೆಸಲು ಸರ್ಕಾರವು ತೆಗೆದುಕೊಂಡ ನಿರ್ಣಯವು ಸರಿ ಇದೆ. ಈ ಬಗ್ಗೆ ದಿನಾಂಕ: 11.04.2018 ರಂದು ಆದೇಶ ಹೊರಡಿಸಿ, ದಿ:27.06.2018ರಂದು ದೋಷಾರೋಪಣೆ ಪಟ್ಟಿಯನ್ನು ಜಾರಿಗೊಳಿಸುವ ಮೂಲಕ ಇಲಾಖಾ ವಿಚಾರಣೆ ಪ್ರಾರಂಭಿಸಿರುವ ಕಾರಣ, ಪ್ರಕರಣವನ್ನು ಮತ್ತೆ ತೆರೆಯುವ ಅವಶ್ಯಕತೆ ಕಂಡು ಬರುವುದಿಲ್ಲ.

ಮಾನ್ಯ ಉಪ ಲೋಕಾಯುಕ್ತ-1, ರವರು ಸಲ್ಲಿಸಿರುವ ವಿಶೇಷ ವರದಿ ಹಾಗೂ ಇದಕ್ಕೆ ಸಂಬಂಧಿಸಿದ ವಿವರಣಾತ್ಮಕ ಜ್ಞಾಪನವನ್ನು ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ಮುಂದೆ

ಮಂಡಿಸುವ ಮುನ್ನ ಗೌರವಾನ್ವಿತ ರಾಜ್ಯಪಾಲರ ಅನುಮೋದನೆಯನ್ನು ಪಡೆಯುವ ಪ್ರಸ್ತಾವನೆಯನ್ನು ಸಚಿವ ಸಂಪುಟವು ದಿನಾಂಕ:20-04-2020ರಂದು ನಡೆದ ಸಭೆಯಲ್ಲಿ ಅನುಮೋದಿಸಿರುತ್ತದೆ.

ಆದ್ದರಿಂದ, ಮಾನ್ಯ ಉಪ ಲೋಕಾಯುಕ್ತ-1 ರವರು ಸಲ್ಲಿಸಿರುವ ವಿಶೇಷ ವರದಿ ಹಾಗೂ ಇದಕ್ಕೆ ಸಂಬಂಧಿಸಿದ ವಿವರಣಾತ್ಮಕ ಜ್ಞಾಪನವನ್ನು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(7) ರನ್ವಯ ಕರ್ನಾಟಕ ವಿಧಾನ ಮಂಡಲದ ಉಭಯ ಸದನಗಳ ಮುಂದೆ ಮಂಡಿಸುವ ಬಗ್ಗೆ ಗೌರವಾನ್ವಿತ ರಾಜ್ಯಪಾಲರ ಅನುಮೋದನೆ / ಆದೇಶಕ್ಕಾಗಿ ಸಲ್ಲಿಸಿದೆ.

Hemalatha

(ಪಿ.ಹೇಮಲತ)
ಸರ್ಕಾರದ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.

**No. DPAR 63 KEV 2015**

## EXPLANATORY MEMORANDUM

Subject:- Special Report Under Section 12(5) of Karnataka Lokayukta Act, 1984 – submitted to His Excellency the Governor of Karnataka by Hon'ble Upalokayukta-1, Karnataka Lokayukta against Sri C.Manjunath, K.A.S. (Junior Scale) Officer, the then Tahshildar, Bangalore South Taluk, Bangalore District.

Hon'ble Upalokayukta-1, Karnataka Lokayukta has submitted a report on 13.01.2014 under section 12(3) of Karnataka Lokayukta Act, 1984 against Sri C.Manjunath, K.A.S. (Junior Scale) Officer, the then Tahshildar, Bangalore South Taluk, Bangalore District that based on a complaint filed by Sri Kempaiah, R/o Srinivasa Colony, Uttharahalli Hobli, Bengaluru South Taluk in the Lokayukta, an investigation under section 9 of the Karnataka Lokayukta Act, 1984 was taken up and accordingly allegations of dereliction of duty, negligence and irresponsibility were made against Sri C.Manjunath, K.A.S. (Junior Scale) Officer, the then Tahshildar, Bangalore South Taluk, Bangalore District and hence recommended to entrust the enquiry against him to Hon'ble Upalokayutka-1 under Rule 14-A of Karnataka Civil Service (Classification, Control and Appeal) Rules, 1957.

The Department of Revenue with the approval of Hon'ble Minister for Revenue has opined as follows vide Un-official Notes dated: 08.05.2015, 05.10.2015 and 07.12.2016:

> "............ ದೂರುದಾರರಾದ ಶ್ರೀ ಕೆಂಪಯ್ಯನವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಆಗಿದ್ದ ಶ್ರೀ ಮಂಜುನಾಥರವರಿಗೆ ಸಲ್ಲಿಸಿದ್ದ ದಿನಾಂಕ ರಹಿತವಾಗಿದ್ದ ಅರ್ಜಿಯಲ್ಲಿ ಕೆಲವೊಂದು ದಾಖಲೆಗಳನ್ನು ಒದಗಿಸುವಂತೆ ಕೋರಿದ್ದು, ಸದರಿ ಅರ್ಜಿಯು ತಹಶೀಲ್ದಾರರ ಕಚೇರಿಯಲ್ಲಿ ದಿ:02.03.2009 ರಂದು ಸ್ವೀಕೃತಗೊಂಡು, ಸಂಬಂಧಪಟ್ಟ ವಿಷಯ ನಿರ್ವಾಹಕರು ದೂರುದಾರರ ಅರ್ಜಿಯ ಬಗ್ಗೆ ಸಕಾಲಿಕವಾಗಿ ಕ್ರಮ ಕೈಗೊಂಡು ತಹಶೀಲ್ದಾರರ ಸಹಿಗಾಗಿ/ ಆದೇಶಕ್ಕಾಗಿ ಮಂಡಿಸದಿರುವುದರಿಂದ ವಿಳಂಬ ಉಂಟಾಗಿರುತ್ತದೆ. ಈ ವಿಳಂಬಕ್ಕೆ ಸಂಬಂಧಪಟ್ಟ ವಿಷಯ ನಿರ್ವಾಹಕರು

--2

ಹೊಣೆಗಾರರಾಗಿದ್ದು, ಆರೋಪಿತ ಅಧಿಕಾರಿಯು ಹೊಣೆಗಾರರಾಗಿರುವುದಿಲ್ಲ ಎಂಬ ಅಂಶವನ್ನು ಜಿಲ್ಲಾಧಿಕಾರಿಗಳ ದಿನಾಂಕ:02.01.2015 ಪತ್ರದಲ್ಲಿಯೂ ಸ್ಪಷ್ಟವಾದ ಕಾರಣಗಳನ್ನು ನೀಡಲಾಗಿದೆ.

ಆರೋಪಿತ ಅಧಿಕಾರಿಯು ಕಚೇರಿಯ ಮುಖ್ಯಸ್ಥರಾಗಿದ್ದರೂ, ಸಾರ್ವಜನಿಕರಿಂದ ಸ್ವೀಕರಿಸಿದ ಪ್ರತಿಯೊಂದು ಅರ್ಜಿ/ ಮನವಿಗಳ ಬಗ್ಗೆ ಗಮನಹರಿಸಿ ಕ್ರಮ ತೆಗೆದುಕೊಂಡು ಮಂಡಿಸುವ ಜವಾಬ್ದಾರಿ ವಿಷಯ ನಿರ್ವಾಹಕರ ಮೇಲಿದ್ದು ತಹಶೀಲ್ದಾರ್ ಹುದ್ದೆಗೆ ಬಹುವಿಧದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗಧಿಪಡಿಸಿರುವುದರಿಂದ ಕಚೇರಿಯಲ್ಲಿ ಸ್ವೀಕರಿಸಿದ ಪ್ರತಿಯೊಂದು ಅರ್ಜಿ / ಮನವಿಗಳ ಬಗ್ಗೆ ಗಮನಹರಿಸಿ ಕ್ರಮ ತೆಗೆದುಕೊಳ್ಳುವುದು ಕಚೇರಿಯ / ಘಟಕದ ಮುಖ್ಯಸ್ಥರಾದ ತಹಶೀಲ್ದಾರ್‌ರವರಿಗೆ ಸಾಧ್ಯವಾಗುವುದಿಲ್ಲ. ಆದುದರಿಂದ ಈ ಪ್ರಕರಣದ ಬಗ್ಗೆ ಜಿಲ್ಲಾಧಿಕಾರಿಗಳು ನೀಡಿರುವ ಸಮರ್ಥನೆ / ವರದಿಯನ್ನು ಪುನರುಚ್ಚರಿಸುತ್ತಾ ಮತ್ತು ಈ ಮೇಲ್ಕಂಡ ಅಂಶಗಳಿಂದ ಪ್ರಕರಣದಲ್ಲಿ ಉಂಟಾದ ವಿಳಂಬಕ್ಕೆ ಆರೋಪಿತ ಅಧಿಕಾರಿಯು ನೇರವಾಗಿ ಹೊಣೆಗಾರರಲ್ಲದಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ಸ್ಪಷ್ಟವಾಗಿ ತಿಳಿಸಲಾಗಿದೆ."

Hence, based on the opinion given by the Department of Revenue that it has accepted the report submitted by the Deputy Commissioner, Bangalore District, wherein, the accused officer is not directly responsible for delay caused in the instant case and since the charges leveled against the accused officer were not grave, it was decided to conduct the Departmental Enquiry against the officer instead of accepting the recommendations Hon'ble Upalokayukta-1 in the report submitted under section 12(3) of Karnataka Lokayukta Act. Approval of Hon'ble Chief Minister was obtained for this proposal and was placed before the cabinet. Accordingly, Government order No.DPAR 63 KEV 2015 dated:11.04.2018 was issued to conduct the Departmental Enquiry against the accused officer by the Government instead of entrusting the same to Hon'ble Upalokayukta-1 under Rule 14A of Karnataka Civil Service (C.C.A) Rules 1957.

Hon'ble Upalokayukta-1, Karnataka Lokayukta has submitted a Special Report to His Excellency the Governor of Karnataka under section 12(5) of Karnataka Lokayukta Act, 1984 against Sri C.Manjunath, K.A.S. (Junior Scale) Officer, the then Tahshildar, Bangalore South Taluk, Bangalore District. Procedure to be followed in respect of Special Report is prescribed in section 12(7) of Karnataka Lokayukta Act, 1984 and the same is given below:

> *"12(7): On receipt of Special Report under Sub Section (5) or the annual report under Sub-section (6) the Governor shall cause a copy there of together with an Explanatory Memorandum to be laid before each house of the State Legislature"*

The Government had examined in detail the recommendations made by the Hon'ble Upalokayukta-1 against Sri C.Manjunath, K.A.S. (Junior Scale) Officer, the then Tahshildar, Bangalore South Taluk, Bangalore District. As per the explanations given in the aforesaid background, the Government has decided not to accept the recommendations and accordingly the decision taken to conduct the Departmental Enquiry by the Government is correct. Since, the Government order in this regard has already been issued on 11.04.2018 and the departmental enquiry has already been initiated by the way of serving the article of charges to the accused officer, there is no necessity to reopen the case once again.

The proposal for obtaining the approval of His Excellency, the Governor, for placing the Special Report of Hon'ble Upa-lokayukta-1 together with Explanatory Memorandum before each house of the State Legislature has been approved by the Cabinet in its meeting held on 20-04-2020.

The Approval / Orders of His Excellency, the Governor are solicited to place the Special Report of Hon'ble Upa-lokayukta together with Explanatory Memorandum before each house of the State Legislature as per Section 12(7) of Karnataka Lokayukta Act, 1984.

Hemalatha P

**(P.Hemalatha)**
Secretary to Government
Department of Personnel and
Administrative Reforms.

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧದ ಲೋಕಾಯುಕ್ತ ಇಲಾಖಾ ವಿಚಾರಣೆಯ ಬಗ್ಗೆ.

**ಓದಲಾಗಿದೆ:-**
(1) ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಕಂಇ 170 ಬಿಎಂಎಂ 2014, ದಿನಾಂಕ:08-05-2015.
(2) ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:COMPT/UPLOK/BCD/254/2009/ARE-10, ದಿನಾಂಕ: 16-01-2014.
(3) ಸರ್ಕಾರದ ಪತ್ರ ಸಂಖ್ಯೆ:ಸಿಆಸುಇ 63 ಕೆಇವಿ 2015, ದಿನಾಂಕ: 23-06-2016
(4) ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಇವರ ಲಿಖಿತ ಹೇಳಿಕೆ ದಿನಾಂಕ:26-06-2015.
(5) ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:ಕಂಇ 170 ಬಿಎಂಎಂ 2014, ದಿನಾಂಕ:05-10-2015 ಹಾಗೂ 07-12-2016

**********

**ಪ್ರಸ್ತಾವನೆ:-**

1. ಕಂದಾಯ ಇಲಾಖೆಯು ಮೇಲೆ ಕ್ರಮಸಂಖ್ಯೆ(1)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:COMPT/UPLOK/BCD/254/2009/ARE-10, ದಿನಾಂಕ:16-01-2014ರೊಂದಿಗೆ ಸ್ವೀಕೃತವಾದ ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರಡಿ ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧದ ಕರ್ತವ್ಯಲೋಪ / ದುರ್ವರ್ತನೆ ಆರೋಪಗಳಿಗೆ ಸಂಬಂಧಿಸಿದಂತೆ ದಿನಾಂಕ:13-01-2014ರಂದು ನೀಡಲಾದ ಶಿಫಾರಸ್ಸುಗಳನ್ನು ಅಭಿಪ್ರಾಯದೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಈ ಇಲಾಖೆಗೆ ಕಳುಹಿಸಲಾಗಿದೆ.

2. ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರಡಿ ದಿನಾಂಕ:13-01-2014 ರಂದು ನೀಡಿರುವ ವರದಿಯಲ್ಲಿ ಶ್ರೀ ಕೆಂಪಯ್ಯ, ಶ್ರೀನಿವಾಸ ಕಾಲೋನಿ, ಉತ್ತರಹಳ್ಳಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಇವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರಹಳ್ಳಿ ಹೋಬಳಿಯ ಅರೇಹಳ್ಳಿ ಗ್ರಾಮದ ಸರ್ವೆ ನಂ.28ರ ಜಮೀನು ಬಾಬ್ತು 1977-78ನೇ ಸಾಲಿನಲ್ಲಿ ತಮಗೆ ದರಕಾಸ್ತ್ ಮೂಲಕ ಮಂಜೂರು ಮಾಡಿರುವ ಜಮೀನಿಗೆ ಸಂಬಂಧಿಸಿದಂತೆ ದಾಖಲಾತಿಗಳನ್ನು ನೀಡುವಂತೆ ಕೋರಿ ದಿನಾಂಕ:02-03-2009 ರಂದು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಇವರಿಗೆ ಮನವಿ ಸಲ್ಲಿಸಿದ್ದು, ಈ ಬಗ್ಗೆ ತಹಶೀಲ್ದಾರರು ದಾಖಲೆಗಳನ್ನು ನೀಡುವಲ್ಲಿ ಅನಗತ್ಯ ವಿಳಂಬ, ನಿರ್ಲಕ್ಷ್ಯತೆ ಹಾಗೂ ಬೇಜವಾಬ್ದಾರಿ ತೋರಿರುವುದರಿಂದ ತಮಗೆ ಬಹಳ ಅನ್ಯಾಯವಾಗಿದ್ದು, ಸದರಿ ದಾಖಲೆಗಳನ್ನು ಕೊಡಿಸಿಕೊಡುವಂತೆ ಮಾನ್ಯ ಲೋಕಾಯುಕ್ತರಲ್ಲಿ ದೂರು ಸಲ್ಲಿಸಿರುತ್ತಾರೆ.

3. ಸದರಿ ದೂರಿನ ಬಗ್ಗೆ ತನಿಖೆ ಕೈಗೊಂಡು, ದೂರುದಾರರು 'ದರಖಾಸ್ತು' ವಿತರಣಾ ವಹಿಯ ಪ್ರತಿ, ಆರ್‌ಆರ್, ಐಎಲ್‌ಆರ್ & ರೆವಿನ್ಯೂ ಸ್ಕೆಚ್ ಕೋರಿ ದಿನಾಂಕ:02-03-2009 ರಂದು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಇವರಿಗೆ ಅರ್ಜಿ ಸಲ್ಲಿಸಿದ್ದು, ದಾಖಲಾತಿಗಳನ್ನು ಪಡೆಯಲು ಅಗತ್ಯ ಶುಲ್ಕವನ್ನು ಪಾವತಿಸಿರುತ್ತಾರೆ. ಶ್ರೀ ಸಿ.ಮಂಜುನಾಥ, ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರು ಅರ್ಜಿಯನ್ನು ಅಗತ್ಯ ಶುಲ್ಕದೊಂದಿಗೆ ಸ್ವೀಕರಿಸಿದ್ದರೂ ಸಹ ದೂರುದಾರರು ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾತಿಗಳನ್ನು ಒದಗಿಸದಿರುವ ಬಗ್ಗೆ ದಿನಾಂಕ:22-05-2009ರಂದು ದೂರನ್ನು ದಾಖಲಿಸುವವರೆಗೂ ಅಧಿಕಾರಿಯು ದೂರುದಾರರಿಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ದೂರುದಾರರು ದಾಖಲಾತಿಗಳ ಪ್ರತಿಯನ್ನು ಒದಗಿಸುವಂತೆ ಅಧಿಕಾರಿಯನ್ನು ಭೇಟಿ ಮಾಡಿ ಪ್ರಸ್ತಾಪಿಸಿದ್ದರೂ ಸಹ, ಅಧಿಕಾರಿಯು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಹುದ್ದೆಯಿಂದ ದಿನಾಂಕ:26-11-2011ರಂದು ವರ್ಗಾವಣೆ ಆಗುವವರೆಗೂ ದೂರುದಾರರು ಕೋರಿರುವ ದಾಖಲೆಗಳ ಪ್ರತಿಯನ್ನು ಒದಗಿಸದೇ ಕರ್ತವ್ಯಲೋಪ ಎಸಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ ನಿಯಮ 3(1)(ii) & (iii)ನ್ನು ಉಲ್ಲಂಘಿಸಿ, ದುರ್ನಡತೆ ತೋರಿ ಶಿಸ್ತುಕ್ರಮಕ್ಕೆ ಬಾಧ್ಯರಾಗಿರುವುದು ಕಂಡುಬಂದಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ-14(ಎ) ರಡಿ ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಲಾಗಿದೆ.

4. ಮೇಲೆ ಕ್ರಮಸಂಖ್ಯೆ(3)ರಲ್ಲಿ ಓದಲಾದ ಪತ್ರದಲ್ಲಿ ಮಾನ್ಯ ಉಪ ಲೋಕಾಯುಕ್ತರ ಕಲಂ 12(3)ರ ವರದಿಯನ್ನು ಆಪಾದಿತ ಅಧಿಕಾರಿಗೆ ಜಾರಿಗೊಳಿಸಿ, ಅಧಿಕಾರಿಯಿಂದ ಲಿಖಿತ ಹೇಳಿಕೆಯನ್ನು ಪಡೆಯಲಾಗಿದೆ ಹಾಗೂ ಅಧಿಕಾರಿಯ ಲಿಖಿತ ಹೇಳಿಕೆಯ ಬಗ್ಗೆ ಆಡಳಿತ ಇಲಾಖೆಯಾದ ಕಂದಾಯ ಇಲಾಖೆಯ ಅಭಿಪ್ರಾಯವನ್ನು ಸಹ ಪಡೆಯಲಾಗಿದೆ.

5. ಮಾನ್ಯ ಉಪ ಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರಡಿ ವರದಿಯಲ್ಲಿ ಮಾಡಿರುವ ಶಿಫಾರಸ್ಸಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯು ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಿಂದ ವರದಿಯನ್ನು ಪಡೆಯಲಾಗಿದೆ. ಜಿಲ್ಲಾಧಿಕಾರಿಗಳ ದಿನಾಂಕ:02-01-2015ರ ವರದಿಯಲ್ಲಿ, 2010-11ನೇ ಸಾಲಿನಲ್ಲಿ ಚುನಾವಣೆಗಳು ಕಾಲಾನುಕ್ರಮದಲ್ಲಿ ಘೋಷಣೆಯಾಗಿದ್ದರಿಂದ ತಹಶೀಲ್ದಾರರು ಆದ್ಯತೆ ಮೇರೆಗೆ ಚುನಾವಣೆ ಕೆಲಸಗಳನ್ನು ನಿಗದಿತ ಕಾಲಾವಧಿಯಲ್ಲಿ ಪೂರ್ಣಗೊಳಿಸಿ ತದನಂತರ ಅರ್ಜಿದಾರರಿಗೆ ದಾಖಲೆಗಳನ್ನು ಒದಗಿಸಲು ಕ್ರಮ ಕೈಗೊಂಡು, ಲಭ್ಯವಾದ ದಾಖಲೆಗಳನ್ನು ಅರ್ಜಿದಾರರಿಗೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಅರ್ಜಿದಾರರು ಕೋರಿರುವ ದಾಖಲೆ ನೀಡಲು ವಿಳಂಬವಾಗಿದ್ದು, ಯಾವುದೇ ದುರುದ್ದೇಶಗಳಿಲ್ಲದೆ ಇಂತಹ ಘಟನೆಗಳು ನಡೆಯಲು ಕಾರಣವಾಗಿದ್ದು, ಇದನ್ನು ದುರ್ನಡತೆ ಎಂದು ಪರಿಗಣಿಸಲು ಬರುವುದಿಲ್ಲ. ದೃಢೀಕೃತ ದಾಖಲೆಗೆ ಸಲ್ಲಿಸುವಂತಹ ಮನವಿಗಳು ಅಭಿಲೇಖಾಲಯ ವಿಷಯ ನಿರ್ವಾಹಕರು ಹಾಗೂ ಶಿರಸ್ತೇದಾರರಿಗೆ ನೇರವಾಗಿ ಸಂಬಂಧಿಸಿದ್ದಾಗಿರುತ್ತದೆ. ಶ್ರೀ ಕೆಂಪಯ್ಯ ಬಿನ್: ದುರ್ಗಯ್ಯರವರು ದಿನಾಂಕ:02-03-2009 ರಂದು ದಾಖಲಾತಿಗಳು ಕೋರಿ ಸಲ್ಲಿಸಿರುವ ಮನವಿಯ ಕುರಿತು ಕ್ರಮ ಕೈಗೊಂಡು ಮಾಹಿತಿ ನೀಡಲು ವಿಳಂಬವಾಗಿರುವುದು ಮೇಲ್ನೋಟಕ್ಕೆ ಕಂಡುಬಂದರೂ ಸಹ ಸದರಿ ವಿಳಂಬಕ್ಕೆ ತಹಶೀಲ್ದಾರ್ ಇವರೇ ನೇರ ಹೊಣೆಗಾರರೆಂದು ಭಾವಿಸುವುದು ಸಮಂಜಸವಲ್ಲವೆಂದು ತಿಳಿಸಲಾಗಿದೆ.

6. ಈ ಪ್ರಕರಣದಲ್ಲಿ ದೂರುದಾರರಾದ ಶ್ರೀ ಕೆಂಪಯ್ಯರವರು ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್‌ರಾಗಿದ್ದ ಶ್ರೀ ಮಂಜುನಾಥರವರಿಗೆ ಸಲ್ಲಿಸಿದ ದಿನಾಂಕ ರಹಿತವಾಗಿದ್ದ ಅರ್ಜಿಯಲ್ಲಿ ಕೆಲವೊಂದು ದಾಖಲೆಗಳನ್ನು ಒದಗಿಸುವಂತೆ ಕೋರಿದ್ದು, ಸದರಿ ಅರ್ಜಿಯು ತಹಶೀಲ್ದಾರರ ಕಛೇರಿಯಲ್ಲಿ

ದಿನಾಂಕ:02-03-2009 ರಂದು ಸ್ವೀಕೃತಗೊಂಡಿದೆ. ಸಂಬಂಧಪಟ್ಟ ವಿಷಯ ನಿರ್ವಾಹಕರು ದೂರುದಾರರ ಅರ್ಜಿಯ ಬಗ್ಗೆ ಸಕಾಲಿಕವಾಗಿ ಕ್ರಮ ಕೈಗೊಂಡು ತಹಶೀಲ್ದಾರರ ಸಹಿಗಾಗಿ / ಆದೇಶಕ್ಕಾಗಿ ಮಂಡಿಸದಿರುವುದರಿಂದ ವಿಳಂಬ ಉಂಟಾಗಿರುತ್ತದೆ. ಈ ವಿಳಂಬಕ್ಕೆ ಸಂಬಂಧಪಟ್ಟ ವಿಷಯ ನಿರ್ವಾಹಕರು ಹೊಣೆಗಾರರಾಗಿದ್ದು, ಆರೋಪಿತ ಅಧಿಕಾರಿಯು ಹೊಣೆಗಾರರಾಗಿರುವುದಿಲ್ಲ. ಆರೋಪಿತ ಅಧಿಕಾರಿಯು ಕಛೇರಿಯ ಮುಖ್ಯಸ್ಥರಾಗಿದ್ದರೂ ಸಾರ್ವಜನಿಕರಿಂದ ಸ್ವೀಕರಿಸಿದ ಪ್ರತಿಯೊಂದು ಅರ್ಜಿ / ಮನವಿಗಳ ಬಗ್ಗೆ ಮೂಲತ: ಕ್ರಮ ತೆಗೆದುಕೊಂಡು ಮಂಡಿಸುವ ಜವಾಬ್ದಾರಿ ವಿಷಯ ನಿರ್ವಾಹಕರ ಮೇಲಿದ್ದು, ತಹಶೀಲ್ದಾರ್ ಹುದ್ದೆಗೆ ಬಹುವಿಧದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ನಿಗದಿಪಡಿಸಿರುವುದರಿಂದ ಕಛೇರಿಯಲ್ಲಿ ಸ್ವೀಕರಿಸಿದ ಪ್ರತಿಯೊಂದು ಅರ್ಜಿ / ಮನವಿಗಳ ಬಗ್ಗೆ ಗಮನವಿರಿಸಿ ಕ್ರವ ತೆಗೆದುಕೊಳ್ಳುವುದು ಕಛೇರಿಯ/ ಘಟಕದ ಮುಖ್ಯಸ್ಥರಾದ ತಹಶೀಲ್ದಾರ್‌ರವರಿಗೆ ಸಾಧ್ಯವಾಗುವುದಿಲ್ಲ. ದೂರುದಾರರಿಗೆ ಮಾಹಿತಿ ನೀಡಲು ವಿಳಂಬವಾಗಿರುವುದು ಅಭಿಲೇಖಾಲಯ ಶಾಖೆಯಿಂದ ವಿನ: ತಹಶೀಲ್ದಾರ್‌ರವರ ಬೇಜವಾಬ್ದಾರಿತನದಿಂದ ವಿಳಂಬವಾಗಿರುವುದಿಲ್ಲ ಮತ್ತು ಅದಕ್ಕೆ ತಹಶೀಲ್ದಾರರು ನೇರ ಜವಾಬ್ದಾರರಾಗಿರುವುದಿಲ್ಲ. ಇದರಿಂದಾಗಿ ಪ್ರಕರಣದಲ್ಲಿ ಉಂಟಾದ ವಿಳಂಬಕ್ಕೆ ಆರೋಪಿತ ಅಧಿಕಾರಿಯು ನೇರವಾಗಿ ಹೊಣೆಗಾರರಲ್ಲದಿರುವುದರಿಂದ, ಅವರ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳುವ ಅಗತ್ಯವಿಲ್ಲವೆಂದು ಮಾನ್ಯ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಕಂದಾಯ ಇಲಾಖೆಯು ಮೇಲೆ ಕ್ರಮಸಂಖ್ಯೆ (5) ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಗಳಲ್ಲಿ ಅಭಿಪ್ರಾಯವನ್ನು ನೀಡಲಾಗಿದೆ.

7. ಶ್ರೀ ಕೆಂಪಯ್ಯ ಬಿನ್ ದುರ್ಗಯ್ಯ, ಶ್ರೀನಿವಾಸ ಕಾಲೋನಿ, ಉತ್ತರಹಳ್ಳಿ, ಬೆಂಗಳೂರು ಇವರು ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಇವರಿಗೆ ದಿನಾಂಕ:02-03-2009 ರಂದು ಸಲ್ಲಿಸಿರುವ ಮನವಿಯಲ್ಲಿ ಅರೆಹಳ್ಳಿ ಗ್ರಾಮದ ಸರ್ವೆ ನಂ.28 ರಲ್ಲಿರುವ 1 ಎಕರೆ 28 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ದರಖಾಸ್ತು ಮಂಜೂರಾತಿ ವಹಿಯ ಪ್ರತಿ, ಆರ್‌ಆರ್-5ರ ಪ್ರತಿ, ಐಎಲ್‌ಆರ್-6, ರೆವಿನ್ಯೂ ಸ್ಕೆಚ್ ಪ್ರತಿ ಇವುಗಳನ್ನು ನೀಡುವಂತೆ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ಇವರಿಗೆ ಮನವಿ ಸಲ್ಲಿಸಿದ್ದು ಮನವಿಯನ್ನು ಸ್ವೀಕರಿಸಿರುವ ಬಗ್ಗೆ ದಿನಾಂಕ: 02-03-2009 ರಂದು ಅರ್ಜಿದಾರರಿಗೆ ಸ್ವೀಕೃತಿಯನ್ನು (Acknowledgement) ನೀಡಲಾಗಿದೆ. ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳು 2010-2011ನೇ ಸಾಲಿನಲ್ಲಿ ಘೋಷಣೆಯಾಗಿದ್ದು, ಅರ್ಜಿದಾರರ ಮನವಿ ಸಲ್ಲಿಕೆ ದಿನಾಂಕ ಹಾಗೂ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆಗಳ ಘೋಷಣೆ ಅವಧಿಯ ನಡುವೆ 1 ವರ್ಷ ಅಂತರವಿರುತ್ತದೆ. ಈ ಅವಧಿಯಲ್ಲಿ ಅರ್ಜಿದಾರರು ಕೋರಿರುವ ದಾಖಲೆಗಳನ್ನು ಅಭಿಲೇಖಾಲಯ ಶಾಖೆಯಲ್ಲಿ ಪತ್ತೆ ಹಚ್ಚಿ ನೀಡಬಹುದಾಗಿತ್ತು ಅಥವಾ ದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ಅರ್ಜಿದಾರರಿಗೆ ಸೂಕ್ತ ಹಿಂಬರಹ ನೀಡಬಹುದಾಗಿತ್ತು. ಆದರೆ ಅಧಿಕಾರಿಯು ಇಂತಹ ಇಂತಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ದೃಢೀಕೃತ ದಾಖಲೆಯನ್ನು ಕೋರಿ ಸಲ್ಲಿಸುವಂತಹ ಮನವಿಗಳು ಅಭಿಲೇಖಾಲಯ ವಿಷಯ ನಿರ್ವಾಹಕರು ಹಾಗೂ ಶಿರಸ್ತೇದಾರರಿಗೆ ನೇರವಾಗಿ ಸಂಬಂಧಿಸಿದೆ ಎಂಬ ಬಗ್ಗೆ / ದೃಢೀಕೃತ ನಕಲುಗಳನ್ನು ಕೋರಿ ಸಲ್ಲಿಸುವ ಮನವಿಗಳ ಬಗ್ಗೆ ಕ್ರಮ ಕೈಗೊಳ್ಳಲು ಅಭಿಲೇಖಾಲಯ ವಿಷಯ ನಿರ್ವಾಹಕರು ಹಾಗೂ ಶಿರಸ್ತೇದಾರ್‌ಗೆ ಅಧಿಕಾರ ಪ್ರತ್ಯಾಯೋಜಿಸಿರುವ ಬಗ್ಗೆ ಕಂದಾಯ ಇಲಾಖೆಯು ಯಾವುದೇ ಮಾಹಿತಿ/ ದಾಖಲೆಯನ್ನು ನೀಡಿರುವುದಿಲ್ಲ.

8. ಅಧಿಕಾರಿಯು ಬೆಂಗಳೂರು ದಕ್ಷಿಣ ತಾಲ್ಲೂಕು ತಹಶೀಲ್ದಾರ್ ಹುದ್ದೆಯಲ್ಲಿ ದಿನಾಂಕ: 22-10-2008 ರಿಂದ 26-11-2011 ರವರೆಗೆ ಕರ್ತವ್ಯ ನಿರ್ವಹಿಸಿದ್ದು, ಈ ಅವಧಿಯಲ್ಲಿ ಅರ್ಜಿದಾರರಿಗೆ ದಾಖಲೆಗಳನ್ನು ಒದಗಿಸಿರುವುದಿಲ್ಲ. ಅಧಿಕಾರಿಯು ಬೆಂಗಳೂರು ದಕ್ಷಿಣ ತಾಲ್ಲೂಕಿನ

-4

ತಹಶೀಲ್ದಾರ್ ಹುದ್ದೆಯಿಂದ ವರ್ಗಾವಣೆ ಹೊಂದಿದ ನಂತರ / ಅರ್ಜಿದಾರರು ಮಾನ್ಯ ಲೋಕಾಯುಕ್ತದಲ್ಲಿ ದಿನಾಂಕ:22-05-2009 ರಂದು ದೂರನ್ನು ದಾಖಲಿಸಿದ ತರುವಾಯ ದಿನಾಂಕ: 27-04-2012 ರಂದು ಅರ್ಜಿದಾರರಿಗೆ ದಾಖಲೆಗಳನ್ನು ಒದಗಿಸಲಾಗಿದೆ. ಇದರಿಂದಾಗಿ ಅಧಿಕಾರಿಯು ಅರ್ಜಿದಾರರು ಕೋರಿರುವ ದಾಖಲೆಗಳನ್ನು ನಿಗದಿತ ಅವಧಿಯೊಳಗೆ ನೀಡದೇ ವಿಳಂಬ ಮಾಡಿರುವುದು ಸ್ಪಷ್ಟವಾಗುತ್ತದೆ. ಕಂದಾಯ ಇಲಾಖೆಯ ಅಭಿಪ್ರಾಯದನ್ವಯ, ಪ್ರಕರಣದಲ್ಲಿ ಅಧಿಕಾರಿಯ ವಿರುದ್ಧದ ಆರೋಪಗಳು ಗುರುತರವಾಗದೇ ಇರುವುದು ಕಂಡುಬರುತ್ತದೆ. ಅಧಿಕಾರಿಯ ವಿರುದ್ಧ ಸ್ವೀಕೃತವಾದ ಮಾನ್ಯ ಉಪ ಲೋಕಾಯುಕ್ತರ ಕಲಂ 12(3)ರಡಿ ವರದಿಯಲ್ಲಿ ಮಾಡಲಾದ ಆರೋಪಗಳು ದುರ್ವರ್ತನೆ ಹಾಗೂ ಕರ್ತವ್ಯಚ್ಯುತಿ/ಕರ್ತವ್ಯಲೋಪದ ಆರೋಪಗಳಾಗಿದ್ದು, ಅಧಿಕಾರಿಯಿಂದ ಸರ್ಕಾರಕ್ಕೆ ಯಾವುದೇ ಆರ್ಥಿಕ ನಷ್ಟ ಉಂಟಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ:

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 63 ಕೆಇವಿ 2015,**
**ಬೆಂಗಳೂರು, ದಿನಾಂಕ:11ನೇ ಏಪ್ರಿಲ್ 2018.**

**9.** ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತರಿಗೆ ವಹಿಸಿಕೊಡುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3)ರಡಿ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ ಮಾಡಿರುವ ಶಿಫಾರಸ್ಸನ್ನು ತಿರಸ್ಕರಿಸಲಾಗಿದೆ.

**10.** ಮುಂದುವರೆದು, ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಹಿಂದಿನ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ, ಅಧಿಕಾರಿಯ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರನ್ವಯ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಲು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ನಾಗರಾಜ್.ಆರ್.)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವೆಗಳು-2).

11/04/2018

ಇವರಿಗೆ:-

(1) ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು - 560 001.

(2) ಮಹಾಲೇಖಪಾಲರು (ಎ&ಇ), (ಜಿಇ-1), ಕರ್ನಾಟಕ, "ಪಾರ್ಕ್ ಹೌಸ್" ಬೆಂಗಳೂರು 560 001. (**"ನೋಂದಾಯಿತ ಅಂಚೆ ಮುಖಾಂತರ ಸ್ವೀಕೃತಿ ಬಾಕಿಯೊಂದಿಗೆ"**).

(3) ಮಾನ್ಯ ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ–I & II, ಮುಖ್ಯಮಂತ್ರಿಯವರ ಸಚಿವಾಲಯ, ವಿಧಾನ ಸೌಧ, ಬೆಂಗಳೂರು – 560 001.

(4) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು – **ಅಧಿಕಾರಿಯ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದಕ್ಕೆ ಸಂಬಂಧಿಸಿದಂತೆ ಸುತ್ತೋಲೆ ಸಂಖ್ಯೆ:ಸಿಆಸುಇ 55 ಕೆಇವಿ 2010, ದಿನಾಂಕ:20–11–2010 ಹಾಗೂ ಸಿಆಸುಇ 1 ಸೇಇವಿ 2005, ದಿನಾಂಕ:09–02–2005ರಲ್ಲಿನ ಮಾರ್ಗಸೂಚಿಯನ್ವಯ ದೋಷಾರೋಪಣಾ ಪಟ್ಟಿ (ಅನುಬಂಧ–1 ರಿಂದ 4), ಅವಶ್ಯಕ ಮಾಹಿತಿ / ದೃಢೀಕೃತ ದಾಖಲೆಗಳೊಂದಿಗೆ ಇಲಾಖಾ ವಿಚಾರಣೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.**

(5) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ, ಬೆಂಗಳೂರು – 560 001.

(6) ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ, 4ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಕಂದಾಯ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು – 560 009. **("ನೋಂದಾಯಿತ ಅಂಚೆ ಮೂಲಕ ಸ್ವೀಕೃತಿ ಬಾಕಿಯೊಂದಿಗೆ")**

(7) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಡಾ॥ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001

(8) ಸರ್ಕಾರದ ಉಪ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು), ವಿಧಾನ ಸೌಧ, ಬೆಂಗಳೂರು – 560 001.

(9) ಅಪರ ನಿಬಂಧಕರು, ವಿಚಾರಣೆಗಳು–10, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು – 560 001.

(10) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ), ವಿಧಾನ ಸೌಧ, ಬೆಂಗಳೂರು : **ಸಚಿವ ಸಂಪುಟ ಪ್ರಕರಣ ಸಂಖ್ಯೆ: ಸಿ:247/2018, ದಿನಾಂಕ:03–03–2018ಕ್ಕೆ ಸಂಬಂಧಿಸಿದಂತೆ ಅನುಸರಣಾ ವರದಿಯನ್ನು ಕಳುಹಿಸಲಾಗಿದೆ.**

(11) ಶ್ರೀ ಸಿ.ಮಂಜುನಾಥ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ, ಸಹಾಯಕ ಆಯುಕ್ತರು (ಭೂಸ್ವಾಧೀನ), ಕರ್ನಾಟಕ ರಾಜ್ಯ ಹೆದ್ದಾರಿಗಳ ಅಭಿವೃದ್ಧಿ ಯೋಜನೆ (KSHIP), ಬೆಂಗಳೂರು ಉಪ ವಿಭಾಗ, ಯೋಜನಾ ಅನುಷ್ಠಾನ ಘಟಕ, 1ನೇ ಮಹಡಿ, ಲೋಕೋಪಯೋಗಿ ಕಟ್ಟಡಗಳ ಸಂಕೀರ್ಣ, ಕೆ.ಆರ್.ವೃತ್ತ, ಬೆಂಗಳೂರು–560 001. **("ನೋಂದಾಯಿತ ಅಂಚೆ ಮುಖಾಂತರ ಸ್ವೀಕೃತಿ ಬಾಕಿಯೊಂದಿಗೆ")**

(13) ಶಾಖಾಧಿಕಾರಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–ಡಿ) ಶಾಖೆ, ವಿಧಾನ ಸೌಧ, ಬೆಂಗಳೂರು.

(14) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.